ಕನಸುಗಳ ತೆಪ್ಪ ಮಗಚುತ್ತಿದೆ...' ಈ ಸಾಲುಗಳನ್ನು ಅವಳು ವಾಟ್ಸ್‌ಆಪ್‌ನ ಸ್ಟೇಟಸ್ಸಾಗಿ ಅಪ್ಡೇಟ್ ಮಾಡಿದ್ದಳು. ಥಟ್ಟನೇ ಅವನಿಂದ ಮೆಸೇಜ್ ಬಂದಿತ್ತು.

'ಅಚಲಾ, ನೀನು ಬರೆಯುತ್ತೀಯಾ?'

'ಅರೆ... ವ್ಹಾ! ಎದೆಯ ನಿರ್ವಾತ, ಕಣ್ಣ ಹನಿಗಳ ಸ್ತೋತ್ರ, ಮಗುಚುವ ತೆಪ್ಪ ಎಲ್ಲ ಎಷ್ಟು ಚಂದ ಕಲ್ಪನೆಗಳು...'

'ಅಚಲಾ, ಮಾತಾಡು...'

ಅವಳಿಗೆ ಏನು ಹೇಳುವುದೆಂದು ಗೊತ್ತಾಗಲಿಲ್ಲ... ತಾನು ಅಷ್ಟೊಂದು ಇಷ್ಟ ಪಡುವ ಬರಹಗಾರ ಆತ. 'ಹರಿದ ಮುಗಿಲು' ಎನ್ನುವ ಅವನ ಕಾದಂಬರಿಯನ್ನು ತಾನೆಷ್ಟು ಸಲ ಓದಿಲ್ಲ? ಅದರ ಬಗ್ಗೆ ಒಂದು ಕಾದಂಬರಿಯೇ ಆಗುವಷ್ಟು ಉದ್ದದ ಕಮೆಂಟನ್ನು ಬರೆದು ವಾಟ್ಸ್‌ಆಪ್ ಮಾಡಿದಾಗ ಅವನು 'ಧನ್ಯವಾದ' ಎನ್ನುವ ನಾಲ್ಕು ಅಕ್ಷರಗಳನ್ನು ಬಿಟ್ಟರೆ ಈ ತನಕ ಒಂದೂ ಮಾತಾಡಿದ್ದಿಲ್ಲ. ತನಗೆ ದೂರದ ನೆಂಟ ಬೇರೆ. ಆದರೂ ಇಷ್ಟು ದಿನ ಅಪರಿಚಿತನಂತೆ ಇರುತ್ತಿದ್ದ. ಆದರೆ ಈಗ ಈ ಸಾಲುಗಳು ನಿನ್ನದಾ ಎಂದು ಕೇಳುತ್ತಿದ್ದಾನೆ. ಏನು ಹೇಳುವುದು? ನನ್ನದಲ್ಲ... ಗೆಳತಿ ಕಂಪನಾ ಬರೆದಿದ್ದು... ಊಹ್ಞೂಂ ಅವಳಿಂದ ಹಾಗೆ ಹೇಳಲು ಸಾಧ್ಯವೇ ಆಗಿರಲಿಲ್ಲ. 'ಹ್ಞೂಂ, ನನ್ನದೇ' ಎಂದಿದ್ದಳು. ಅನಂತರ ದಿನಾ ದಿನಾ ಸಾಲುಗಳು ಅವನಿಂದ; ಗೆಳತಿಯಿಂದ ಕಡ ಪಡೆದು ಇವಳಿಂದಲೂ ಸಾಲುಗಳು... ಬರೀ ಸಾಲುಗಳಷ್ಟೆ ಅಲ್ಲ, ನೇರವಾಗಿ ಹೇಳಿಕೊಳ್ಳಲಾರದ ಮನದ ಮಾತುಗಳು... ಇಷ್ಟು ದಿನ ಮುಗಿಲು, ಕಡಲು, ಹನಿ, ಹಕ್ಕಿ ಎಂದು ಗೀಚುತ್ತಿದ್ದವನು ಈಗ ಪ್ರೀತಿ ಎನ್ನುವವರೆಗೆ ಬಂದು ನಿಂತಿದ್ದಾನೆಂದರೆ ಅಚಲಾ ಕಂಪಿಸಿದಳು. ಅಷ್ಟರಲ್ಲಿ ಪಕ್ಕಕ್ಕೆ ಸರಿಸಿದ್ದ ತರಕಾರಿ ಚೀಲ ಎತ್ತಿಕೊಂಡು ಕಪ್ಪಗೆ ಅವಳೆಂದುಕೊಂಡಿದ್ದರಲ್ಲಿ ಮೊದಲನೇ ಕ್ಯಾಟಗರಿಯವನೇ ಬಂದು ಕುಳಿತಿದ್ದ. ಅವಳು ಆ ಸಾಲುಗಳೊಳಗೆ ಮುಳುಗಿದ್ದರಿಂದ ಅವನನ್ನು ನೋಡಿ ನಗಲಾಗಲಿಲ್ಲ. ಇವನಿಗೆ ಹೇಳಿ ಬಿಡುವುದಾ ನಾನು ಇಷ್ಟು ದಿನ ಬರೆದ ಸಾಲುಗಳ್ಯಾವುದೂ ನನ್ನದಲ್ಲ ಎಂದು? ಗೆಳತಿ ಕಂಪನಾ ಬರೆದಿದ್ದೆಂದು? ಅವನು ಬಯ್ಯಬಹುದಾ? ನಾನು ಪ್ರೀತಿಸುತ್ತಿರುವುದು ಸಾಲುಗಳನ್ನಲ್ಲ ಮಾರಾಯ್ತಿ... ನಿನ್ನನ್ನು ಎಂದು ಹೇಳಬಹುದಾ? ತಾನೇ ಪ್ರಶ್ನಿಸಿಕೊಂಡು ಬೆಚ್ಚುತ್ತಾ, ನಾಚುತ್ತಾ ಗೊಂದಲದಲ್ಲಿ ಕುಳಿತಳು. ಅಷ್ಟರಲ್ಲಿ ಕಂಡಕ್ಟರ್ ಬಂದು ಪಾಸಾ? ಎಂದು ಕೇಳಿದ.

ಪಾಸೋ ಫೇಲೋ ರಿಸಲ್ಟ್ ಬಂದಿಲ್ಲ ಎನ್ನಬೇಕೆಂದುಕೊಂಡವಳು ಹಾಗನ್ನದೇ 'ಪಾಸ್' ಎನ್ನುತ್ತಾ ಪಾಸ್ ತೆಗೆದು ತೋರಿಸಿದಳು. ಐದು ನಿಮಿಷಗಳಲ್ಲಿ ಬಸ್ಸು ಹೊರಟಿತು.

ಅವಳ ಮನಸ್ಸಿನ ಹಠಾತ್ ಮೌನವನ್ನು ನೋಡಿಯೇ ಇರಬೇಕು ಮುಗಿಲೂ ಮೌನವಾಗಿತ್ತು. ಮಳೆ ನಂತರದ ತಣ್ಣಗಿನ ಗಾಳಿಯ ಬರಮಾಡಿಕೊಳ್ಳಲು ಕಿಟಕಿಯ ಗ್ಲಾಸನ್ನು ಸರಿಸಿದಳು. ಮಳೆಯಲ್ಲಿ ನೆನೆದ ಪೇಟೆ ಹೊಸ ಹೊಳಪೊಂದನ್ನು ಮುಡಿದುಕೊಂಡಿತ್ತು. ಹೊಂಡಗುಂಡಿಯ ರಸ್ತೆ, ನೀರು ತುಂಬಿ ಹೊಳೆಯಾದ ನೆಹರೂ ಮೈದಾನ, ಕೋರ್ಟ್, ಹನಿಗಳನ್ನು ತೊಟ್ಟಿಕುತ್ತ ಮಳೆಯನ್ನು ಮುಗಿಲಿಗಿಂತಲೂ ಹೆಚ್ಚಾಗಿ ಹೊಯ್ಯಿಸುವ ಸಾಲು ಸಾಲು ಮರಗಳು, ಚೆಕ್ ಪೋಸ್ಟ್ ಎಲ್ಲ ದಾಟಿ ಕಾಲೇಜ್ ಎದುರಿಗೆ ಬಸ್ ನಿಂತಾಗ ಒಮ್ಮೆ ಕಾಲೇಜಿನತ್ತ ಕಣ್ಣು ಹಾಯಿಸಿ ಅಲ್ಲಿಯೇ ಫ್ರೈಡ್ ರೈಸ್ ಬೇಯಿಸುತ್ತಿರುವ ಅಂಕಲ್ ನೋಡಿ ಮುಗುಳ್ನಕ್ಕಳು. ಪಕ್ಕದಲ್ಲಿದ್ದವನು ಆಗಲೇ ಎರಡು ಸಲ ಹಲ್ಲುಗಿಂಜಿದ್ದ. ಅವಳು ನಕ್ಕಂತೆ ಮಾಡಿ ಸುಮ್ಮನಾಗಿದ್ದಳು. ಆದರೂ ಕಸಿವಿಸಿ. ತಾನು ಇನ್ಯಾರದೋ ಜಾಗದಲ್ಲಿ ಕುಳಿತಿದ್ದೇನಿ. ಬರೀ